**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. :2340/2019** **ದಿನಾಂಕ: 27.07.2026**
**ಸಿ ಡಬ್ಲ್ಯೂ : 4**
**ಪಿ ಡಬ್ಲ್ಯೂ : 2**

------------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಸಚೀನ ಪ್ರಕಾಶ ಅಳ್ಳಿಮಟ್ಟಿ |
| ವಯಸ್ಸು | 27 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಸಾ: ಅಥಣಿ |

**<u>ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ1 ನನ್ನ ಸಹೋದರ . ಚಾಸಾ 5 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುವುದಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನನಗೆ ಯಾವುದೇ ರಸ್ತೆ ಅಫಘಾತವಾಗಿರುವುದಿಲ್ಲ ಮತ್ತು ರಸ್ತೆ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು: - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ದಿ: 31.03.2019 ರಂದು ಮಧ್ಯಾಹ್ನ 3.30 ಗಂಟೆಗೆ ಜತ್ತ ಕಡೆಯಿಂದ ಅಥಣಿ ಕಡೆಗೆ ನಾನು ನನ್ನ ಮೋಟಾರ ಸೈಕಲ ನಂ. ಕೆ ಎ 23 ಎಕ್ಸ 2763 ನೇದ್ದರ ಹಿಂದಿನ ಸೀಟಿನಲ್ಲಿ ಚಾಸಾ 5 ರವರನ್ನು ಕೂಡಿಸಿಕೊಂಡು ಮೋಟಾರ ಸೈಕಲನ ರಸ್ತೆಯ ಬದಿಯಿಂದ ನಡೆಸಿಕೊಂಡು ಬರುತ್ತಿದ್ದಾಗ ಆರೋಪಿತನು

ನೋಂದಣಿ ಮಾಡಿಸಿದ ತನ್ನ ಮೋಟಾರ ಸೈಕಲ ಚೆಸ್ಸಿ ನಂ. ಎಮ್ ಡಿ 2ಎ 76ಎ ವೈ 6ಝಡ್ ಡಬ್ಲೂ ಜೆ 03 245 ನೇದ್ದನ್ನು ಮೋಟಾರ ಸೈಕಲ ಚಾಲನಾ ಪತ್ರ ಹೊಂದದೆ ಅಥಣಿ ಕಡೆಯಿಂದ ಜತ್ತ ಕಡೆಗೆ ಜೋರಿನಿಂದ ಮತ್ತು ನಿರ್ಲಕ್ಷ್ಯತನದಿಂದ ರಸ್ತೆ ಕಡೆಗೆ ಲಕ್ಷ್ಯ ಕೊಡದೆ ನಡೆಸುತ್ತಾ ಬಂದು ನಾನು ನಡೆಸಿಕೊಂಡು ಹೋಗುತ್ತಿದ್ದ ಮೋಟಾರ ಸೈಕಲಗೆ ಹಾಯಿಸಿ ಅಪಘಾತ ಪಡಿಸಿ ನಮ್ಮನ್ನು ಕೆಡವಿ ನನಗೆ ಮತ್ತು 5 ಇವರಿಗೆ ಬಾರಿ ಮತ್ತು ಸಾದಾ ಗಾಯ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಬಗ್ಗೆ ನಾನು ಚಾಸಾ 1 ರವರಿಗೆ ಪೊನ ಮಾಡಿ ತಿಳಿಸಿದ್ದು ಆಗ ಚಾಸಾ 1 ರವರು ಅಪಘಾತ ಸ್ಥಳಕ್ಕೆ ಬಂದು ನಮ್ಮನ್ನು ನೋಡಿ ಆಗ ನಾವು ನೆಲದ ಮೇಲೆ ಬಿದ್ದಿದ್ದು , ನಮ್ಮನ್ನು ಖಾಸಗಿ ವಾಹನದಲ್ಲಿ ಕರೆದುಕೊಂಡು ಬಂದು ಅಥಣಿಯ ವೈದ್ಯರಾದ ರಮೇಶ ಕಾರೆರವರ ಬಳಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿ ನ ಉಪಚಾರಕ್ಕೆ ಮಿರಜನ ಡಾಃ ಬಾಲಚಂದ್ರ ಪಾಟೀಲ ಅವರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತಪಡಿಸಿದ ಆರೋಪಿತನ ಹೆಸರು ಮಹಾದೇವ ಗಣಪತಿ ಬೋಸಲೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಗಳನ್ನು ನಿಪಿ 3 ಮತ್ತು 4 ಅಂತಾ ಗುರುತಿಸಲಾಯಿತು.

ಆರೋಪಿತರೊಂದಿಗೆ ರಾಜಿ ಆಗಿ ಪ್ರಕರಣದ ಬಗ್ಗೆ ಮಾಹಿತಿ ಇದ್ದರು ಸಹಿತ ನನಗೆ ರಸ್ತೆ ಅಪಘಾತವಾಗಿದ್ದು ಅಪಘಾತದಲ್ಲಿ ಗಾಯವಾಗಿದ್ದರು ಸಹಿತ ಮತ್ತು ಪ್ರಕರಣದ ಬಗ್ಗೆ ಮಾಹಿತಿ ಇದ್ದರು ಸಹಿತ ಆರೋಪಿತನಿಗೆ ಸಹಾಯವಾಗಲಿ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ . ಕೆ ಎಮ್ ಡಬ್ಲೂ ವಕೀಲರಿಂದಃ</u>**

ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.